ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, ಅನುದಾನ ತೆಗೆದುಕೊಂಡ ಮೇಲೆ ಅವರು ಸರ್ಕಾರದ ನಿಯಮಗಳಿಗೆ ಬದ್ಧರಾಗಬೇಕಾಗುತ್ತದೆ.

ಅಧ್ಯಕ್ಷರು:– ತಾವು ಸಚಿವರಾಗಿ ಕೆಲಸ ಮಾಡಿರುವವರು, ನೀವೇ ಹೀಗೆ ಮಾಡಿದರೆ ಹೇಗೆ?

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, ಕೊಡಬೇಕು. ಆ ರೀತಿಯಾದರೆ ಅನುದಾನ ಏಕೆ ಕೊಡುತ್ತೀರಿ?

ಅಧ್ಯಕ್ಷರು:– ಪರಿಶೀಲನೆ ಮಾಡುತ್ತೇವೆಂದು ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ:– ಹಾಗಾದರೆ ಅನುದಾನ ಯಾವ ಕಾರಣಕ್ಕಾಗಿ ಕೊಡುತ್ತೀರಿ? ಅವರಿಗೆ reservation ಇಲ್ಲ, ಅನುಕಂಪದ ಆಧಾರದ ಮೇಲೆ ಇಲ್ಲ, ಮತ್ತೆ ರೀತಿ.....

ಅಧ್ಯಕ್ಷರು:– ಆಯಿತು, ಮಾನ್ಯ ಕೋನರೆಡ್ಡಿಯವರೆ, ಹೇಳಿ.

ಆ) ವಿಷಯ: ನವಲಗುಂದ ಕ್ಷೇತ್ರದಲ್ಲಿ ಬರುವ ಅಣ್ಣಿಗೇರಿ ನಗರವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸುವ ಬಗ್ಗೆ.

ಶ್ರೀ ಎನ್.ಹೆಚ್. ಕೋನರೆಡ್ಡಿ (ನವಲಗುಂದ):– ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಹೊಸ ತಾಲ್ಲೂಕುಗಳನ್ನು ರಚನೆ ಮಾಡುವುದಾಗಿ ಹಿಂದಿನ ಸರ್ಕಾರದಲ್ಲಿ ಘೋಷಣೆ ಮಾಡಿದ್ದರು. ಇಂದಿನ ಸರ್ಕಾರವು ತಾಲ್ಲೂಕು ರಚನೆ ಮಾಡುವ ಬಗ್ಗೆ 2013–14ನೇ ಆಯವ್ಯಯದಲ್ಲಿ ಯಾವುದೇ ನಿರ್ಧಾರವನ್ನು ಘೋಷಣೆ ಮಾಡಿಲ್ಲ. ನನ್ನ ಕ್ಷೇತ್ರ ನವಲಗುಂದ ವಿಧಾನಸಭೆಯಲ್ಲೂ ಕೂಡ ಅಣ್ಣಿಗೇರಿ ನಗರವನ್ನು ತಾಲ್ಲೂಕು ಮಾಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು:– ಪ್ರಶ್ನೆ ಕೇಳಿ.

ಶ್ರೀ ಎನ್.ಹೆಚ್. ಕೋನರೆಡ್ಡಿ:– ಮಾನ್ಯ ಅಧ್ಯಕ್ಷರೆ, ನಾನು ಅದನ್ನೇ ಹೇಳುತ್ತಿದ್ದೇನೆ. ಇದರ ಬಗ್ಗೆ ಸರ್ಕಾರ ಏನು ನಿರ್ಧಾರ ಮಾಡುತ್ತದೆಂಬ ಬಗ್ಗೆ ಉತ್ತರ ಕೊಡಬೇಕೆಂದು ಬಯಸುತ್ತೇನೆ.

ಅಧ್ಯಕ್ಷರು:– ತಾವು ಅಣ್ಣಿಗೇರಿ ನಗರವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸುವ ಬಗ್ಗೆ ಕೇಳಿದ್ದೀರಿ. ನೀವು ಅದನ್ನು ಕೇಳಬೇಕು. ಅದನ್ನು ಕೇಳುವುದು ಬಿಟ್ಟು ಏನೋ ಕೇಳುತ್ತಿದ್ದೀರಿ.

ಶ್ರೀ ಎನ್.ಹೆಚ್. ಕೋನರೆಡ್ಡಿ:– ಹೌದು ಸಾರ್. ರಾಜ್ಯದ್ದು ಕೇಳುತ್ತಿದ್ದೇನೆ, ಅದನ್ನೂ ಕೇಳುತ್ತಿದ್ದೇನೆ.

ಅಧ್ಯಕ್ಷರು:– ಆಯಿತು, ಮಂತ್ರಿಗಳೇ ಉತ್ತರ ಹೇಳಿ.

ಶ್ರೀ ಟಿ.ಬಿ. ಜಯಚಂದ್ರ:– (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಕಂದಾಯ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಮಾನ್ಯ ಕೋನರೆಡ್ಡಿಯವರು ನವಲಗುಂದ ಕ್ಷೇತ್ರದಲ್ಲಿ ಬರುವ ಅಣ್ಣಿಗೇರಿ ನಗರವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸುವ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದಾರೆ. ಈ ವಿಷಯವನ್ನು ಮಾನ್ಯ ಕಂದಾಯ ಸಚಿವರಿಗೆ ರವಾನೆ ಮಾಡುತ್ತೇನೆ. ಈ ಬಗ್ಗೆ ಸೂಕ್ತವಾದಂಥ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು:– ok, ಮಾನ್ಯ ಹೆಚ್.ಡಿ. ರೇವಣ್ಣನವರು ಇಲ್ಲ. ಇನ್ನು ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರೆ ಕೇಳಿ.

(ಮಾನ್ಯ ಹೆಚ್.ಡಿ. ರೇವಣ್ಣನವರು ಸಭೆಯಲ್ಲಿ ಹಾಜರಿರಲಿಲ್ಲ)

ಇ) ವಿಷಯ: ಅಂಕೋಲದ ಸಾಮಾಜಿಕ ಕಾರ್ಯಕರ್ತರಾದ ಶ್ರೀ ಆರ್.ಎನ್. ನಾಯಕ ಇವರ ಹತ್ಯೆಯ ಕುರಿತಂತೆ ತನಿಖೆಯು ವಿಳಂಬವಾಗುತ್ತಿರುವ ಬಗ್ಗೆ.